ಎಷ್ಟು ಬೇಗ ಸಾಧ್ಯವೊ ಅಷ್ಟು ಬೇಗ ಕೊರೆಸಿಕೊಡುತ್ತೇವೆ. ಯಾವುದನ್ನೂ ಸಹ ಬಾಕಿ ಇಡುವುದಿಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಇದು ರಾಜ್ಯಮಟ್ಟದ ಸಮಸ್ಯೆಯಾಗಿದೆ.

ಅಧ್ಯಕ್ಷರು:– ನಾನು ಹೇಳುವುದನ್ನು ಎಲ್ಲರೂ ದಯವಿಟ್ಟು ಕೇಳಿ. ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಪ್ರಶ್ನೆ ಕೇಳಿದ್ದಾರೆ. ನೀವು ಬೇರೆ ಪ್ರಶ್ನೆ ಕೇಳಿ. ಇಡೀ ರಾಜ್ಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನೀವೆಲ್ಲರೂ ಸೇರಿ ಪ್ರಶ್ನೆ ಕೇಳಿದರೆ ಆ ವಿಷಯದ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡುತ್ತೇನೆ. ಈ ಬಗ್ಗೆ ಒಂದು ಪತ್ರವನ್ನು ಕೊಡಿ. ನಾನು ಹೇಳುವುದನ್ನು ಸ್ವಲ್ಪ ಕೇಳಿ. ನೀವೆಲ್ಲರೂ ಇಡೀ ರಾಜ್ಯದ ವಿಚಾರವನ್ನು ಕೇಳುತ್ತಿದ್ದೀರಿ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:– ಈ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಚರ್ಚೆ ಮಾಡುವುದಕ್ಕೋಸ್ಕರ ಪತ್ರ ಕೊಡಿ. ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಸಚಿವರೆ, ರಾಜ್ಯದ ಸಮಗ್ರ ಮಾಹಿತಿ ಬಗ್ಗೆ ಆ ಸಂದರ್ಭದಲ್ಲಿ ಉತ್ತರ ಹೇಳಬೇಕು.

ವಿದ್ಯಾರ್ಥಿ ವೇತನ ಬಿಡುಗಡೆ

44(945); ಶ್ರೀ ಮಧು ಬಂಗಾರಪ್ಪ ಎಸ್. (ಸೊರಬ)

ಅ) ಸರ್ಕಾರ ನೀಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವು ಸಮರ್ಪಕವಾಗಿ ತಲುಪದೆ ಪುನಃ ವಾಪಸಾತಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅಂತಹ ಎಷ್ಟು ಪ್ರಕರಣಗಳನ್ನು ಇದುವರೆವಿಗೂ ಗುರುತಿಸಲಾಗಿದೆ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ

ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಸರಿಯಾದ ಸಮಯದಲ್ಲಿ ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಸೊರಬ ತಾಲ್ಲೂಕು ಜಡೆ ಕೆಸರಾ ಬ್ಯಾಂಕಿನಲ್ಲಿ ಏಪ್ರಿಲ್ 2014 ರಂದು ನೀಡಿದ ರೂ. 3.00 ಲಕ್ಷಗಳ ವಿದ್ಯಾರ್ಥಿ ವೇತನದ ಚೆಕ್ಕು ಈವರೆಗೂ ವಿದ್ಯಾರ್ಥಿಗಳಿಗೆ ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಲೋಪಕ್ಕೆ ಕಾರಣಾರಾದವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಪೂರ್ಣ ವಿವರಗಳನ್ನು ನೀಡುವುದು)?

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) –ಇಲ್ಲ–

-No-

ಆ) ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು 2012–13ನೇ ಸಾಲಿನಿಂದ ಗಣಕೀಕರಣಗೊಳಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಆನ್‌ಲೈನ್ ಮೂಲಕ ನೋಂದಾಯಿಸಲಾದ ಅರ್ಹ ವಿದ್ಯಾರ್ಥಿಗಳಿಗೆ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಮೂಲಕ ವಿದ್ಯಾರ್ಥಿ ವೇತನ ಮಂಜೂರು ಮಾಡಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನ ಮೊತ್ತವನ್ನು ಜಮೆ ಮಾಡಲಾಗುತ್ತಿದೆ.

ಅದೇ ರೀತಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು 2009–10ನೇ ಸಾಲಿನಿಂದ ಗಣಕೀಕರಣಗೊಳಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಆನ್‌ಲೈನ್ ಮೂಲಕ ನೋಂದಾಯಿಸಲಾದ ಅರ್ಹ ವಿದ್ಯಾರ್ಥಿಗಳಿಗೆ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಮೂಲಕ ವಿದ್ಯಾರ್ಥಿ ವೇತನ ಮಂಜೂರು ಮಾಡಿ, ಸರ್ಕಾರ ನಿಗಧಿಪಡಿಸಿದ ಕಡ್ಡಾಯ ಶುಲ್ಕಗಳನ್ನು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರ

ಬ್ಯಾಂಕ್ ಖಾತೆಗೆ, ಡೇ ಸ್ಕಾಲರ್ ವಿದ್ಯಾರ್ಥಿಗಳ ನಿರ್ವಹಣ ವೆಚ್ಚವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಮತ್ತು ಹಾಸ್ಟಲರ್ ವಿದ್ಯಾರ್ಥಿಗಳ ನಿರ್ವಹಣಾ ವೆಚ್ಚವನ್ನು ಸಂಬಂಧಿಸಿದ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿದೆ.

ಈ ವಿದ್ಯಾರ್ಥಿ ವೇತನದ ಮೊತ್ತವನ್ನು ಸಂಬಂಧಿಸದವರ ಬ್ಯಾಂಕ್ ಖಾತೆಗೆ RTGS?NEFT ಮೂಲಕ ಜಮೆ ಮಾಡಲಾಗುತ್ತಿದೆ.

Pre metric scholarship which is being sanctioned to SC students was computerized since 2012-13. This scholarship is being sanctioned by TSWO to all eligible students who have registered online. The scholarship amount is being credited to the Bank Account of the students.

Post metric scholarship scheme was also computerized since 2009-10. This scholarship is being sanctioned by TSWO to all eligible students who have registered online. The compulsory nonrefundable fee fixed by the Government will be paid to the Bank account of the Institution.

Maintenance charges of the day scholars will be credited to the bank account of the students and maintenance charges of hostellers will be credited to the bank account of the concerned hostel warden

This amount is being credited to the bank account of the concerned brough RTGS/NEFT.

ಇ) –ಹೌದು–

-Yes-

ಈ) ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು 2014ನೇ ಮಾರ್ಚ್ ಮಾಹೆಯಲ್ಲಿ ಖಜಾನೆಯಿಂದ ರೂ. 3,09,200/–ಗಳ ಚೆಕ್ಕನ್ನು ಪಡೆದು ಕೆನರಾ ಬ್ಯಾಂಕ್, ಜಡೆ, ಇಲ್ಲಿಗೆ ನೋಂದಣಿ ಅಂಚೆ ಮೂಲಕ ರವಾನಿಸಿರುತ್ತಾರೆ. ಬ್ಯಾಂಕಿನ ವ್ಯವಸ್ಥಾಪಕರು ಚೆಕ್ಕನ್ನು ದಿನಾಂಕ: 24–04–2014 ರಂದು ಸ್ವೀಕರಿಸಿರುತ್ತಾರೆ. ಆದರೆ ಬ್ಯಾಂಕಿನವರು ಸದರಿ ಚೆಕ್‌ನ್ನು ಕಳೆದುಕೊಂಡಿದ್ದು, ಬದಲಿ ಚೆಕ್‌ನ್ನು ನೀಡುವಂತೆ ಕೋರಿರುತ್ತಾರೆ ಅಂದರಂತೆ ಖಜಾನೆಯಿಂದ ಬದಲಿ ಚೆಕ್ ಪಡೆಯಲು ಕ್ರಮಕೈಗೊಳ್ಳಲಾಗಿದೆ. ಖಜಾನೆಯಿಂದ ಚೆಕ್ ಪಡೆದು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನ ಜಮೆ ಮಾಡಲು ಕ್ರಮವಹಿಸಲಾಗುವುದು.

ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳು ಬ್ಯಾಂಕಿಗೆ ಚೆಕ್‌ನ್ನು ಕಳುಹಿಸಿದ ನಂತರ ಸದರಿ ಮೊತ್ತವು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಆಗಿದೆಯೇ ಎಂದು ದೃಢಪಡಿಸಿಕೊಳ್ಳಬೇಕಾಗುತ್ತದೆ. ಆದರೆ, ಈ ರೀತಿ ಕ್ರಮವಹಿಸಿರುವುದು ಕಂಡುಬಂದಿರುವುದಿಲ್ಲ. ಈ ಬಗ್ಗೆ ತಪ್ಪಿತಸ್ಥರ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು.

ಅದೇ ರೀತಿ ಬ್ಯಾಂಕಿನ ವ್ಯವಸ್ಥಾಪಕರೂ ಕೂಡಾ ಚೆಕ್ ಪಡೆದ ಕೂಡಲೇ ಸಂಬಂಧಿಸಿದ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಬೇಕಿತ್ತು ಇದೂ ಸಹಾ ಬ್ಯಾಂಕಿನ ಲೋಪ ಆಗಿರುತ್ತದೆ. ಆದುದರಿಂದ ಇವರ ಮೇಲೆಯೂ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲು ಸಂಬಂಧಿಸಿದವರಿಗೆ ತಿಳಿಸಲಾಗುವುದು.

Taluk Social Welfare Officer, Soraba Taluk has sent the treasury cheque of Rs 3,09,200/- Canara Bank, Jade by Registered Post. The Bank Manager has received the cheque on 24.04.2014. But, Bank officials have lost the cheque and requested to issue alternate cheque. Action has been taken to

get alternate cheque from the treasury. After receiving the cheque from the treasury, scholarship amount will be credited to the Bank accounts of the students.

After sending the cheque to the Bank, TSWO should have confirmed the disbursal of scholarship amount to the bank accounts of the students. But he has not done so. Action will be taken against the concerned.

After receiving the cheque, Bank Manager should have credited the amount to the bank account of the students, This is also lapse on the part of the bank. So, It will be informed to the concerned to take the necessary action on the bank Manager.

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿ ಕೊಟ್ಟಿದ್ದಾರೆ. ಆದರೆ, ಏನಾಗಿದೆ ಎಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಕೊಡುತ್ತಿದ್ದಾರೆ. ಆದರೆ, ನಮ್ಮಲ್ಲಿ ಸುಮಾರು ಒಂದು ವರ್ಷದಿಂದ ವಿದ್ಯಾರ್ಥಿ ವೇತನವನ್ನು ಕೊಟ್ಟಿಲ್ಲ. ಇವತ್ತಿಗೂ ಸಹ ವಿದ್ಯಾರ್ಥಿ ವೇತನ ತಲುಪಿಲ್ಲ. ವಿದ್ಯಾರ್ಥಿ ವೇತನ ಕೊಡಿ ಎಂದು ಮಕ್ಕಳು ಕೆನರಾ ಬ್ಯಾಂಕ್‌ಗೆ ಹೋಗಿ ಕೇಳುತ್ತಿದ್ದಾರೆ.

ಅಧ್ಯಕ್ಷರು:– ಹಾಗಾದರೆ, ಅದನ್ನೆ ಸರ್ಕಾರ ಎನ್ನುವುದು?

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಜನಪ್ರತಿನಿಧಿಗಳಿಗೆ ಏನು ತೊಂದರೆ ಆಗಿದೆ ಎಂದರೆ ಬ್ಯಾಂಕ್‌ಗಳಿಗೆ ಹೋಗಿ ಕೇಳಿದರೆ ವಿದ್ಯಾರ್ಥಿ ವೇತನದ ಹಣ ಬಂದಿಲ್ಲ. ಆದ್ದರಿಂದ, ನೀವು ಅಧಿಕಾರಿಗಳನ್ನು ಕೇಳಿ ಎಂದು ಹೇಳುತ್ತಾರೆ. ಆದರೆ, ನಾವು ಹಣವನ್ನು ಕಳುಹಿಸಿದ್ದೇವೆ. ಆದ್ದರಿಂದ, ನೀವು ಹೋಗಿ ಬ್ಯಾಂಕ್‌ನವರನ್ನು ಕೇಳಿ ಎಂದು ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ. ಈ ಸಂದರ್ಭದಲ್ಲಿ

ನಾನು ಕೇಳುವುದೇನೆಂದರೆ, ಈ ರೀತಿಯಾದ ಬೇಜವಾಬ್ದಾರಿತನ ಕೆಲಸವನ್ನು ಅಧಿಕಾರಿಗಳು ಮಾಡಿದಾಗ ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ, ದುಡ್ಡು ಬರುತ್ತದೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಅಧ್ಯಕ್ಷರು:– ನಿಮ್ಮ ಆತಂಕ ಏನೆಂದು ಸ್ಪಷ್ಟವಾಗಿ ಹೇಳಿ. ಅಂದರೆ, ಆಯಾ ವರ್ಷದ ಹಣವನ್ನು ಆಯಾ ವರ್ಷವೇ ಬಿಡುಗಡೆ ಮಾಡಿ ವಿದ್ಯಾರ್ಥಿಗಳ ಕೈಗೆ ಸಿಗುವಂತೆ ಮಾಡಬೇಕೆಂಬುದು ನಿಮ್ಮ ಆಗ್ರಹವಲ್ಲವೇ?

ಶ್ರೀ ಎಸ್. ಮುಧು ಬಂಗಾರಪ್ಪ:– ಮಾನ್ಯ ಅಧ್ಯಕ್ಷರೆ, ಈ ಕೆಲಸ ಆಗಬೇಕು. ಆ ಹುಡುಗರು ನಮ್ಮ ಮನೆ ಬಾಗಿಲು ಕಾಯಬಾರದು.

ಅಧ್ಯಕ್ಷರು:– ಆ ರೀತಿ ಆದರೆ ಅದು ಸರ್ಕಾರ ಆಗಿ ಉಳಿಯುವುದಿಲ್ಲ. ಮಾನ್ಯ ಕಾನೂನು ಸಚಿವರು ಇಲ್ಲೇ ಇರುವುದರಿಂದ ಒಂದು ವಿಷಯ ಹೇಳುತ್ತೇನೆ. ಹೊಸಕೋಟೆಯಲ್ಲಿ ಒಂದು ಜಮೀನಿನ ವ್ಯವಹಾರ ಇತ್ತು. ಈ ಜಮೀನು ಅಕ್ರಮವಾಗಿ ಪಡೆದುಕೊಳ್ಳಲಾಗಿದೆ. ಈಗ ಅದು vacate ಕೂಡ ಆಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾಲ್ಕೈದು ಜನ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಲ್ಲಿಂದ ಪ್ರಸ್ತಾವನೆ ಬಂದಿದೆ. ಮಾನ್ಯ ಕಂದಾಯ ಸಚಿವರಿಗೆ ಏನು ಕೇಳಿದೆ ಎಂದರೆ, ನಿಮ್ಮ ಮುಖ್ಯ ಮಂತ್ರಿಗಳು ಪಾರದರ್ಶಕ ಆಡಳಿತ ಎಂದು ಹೇಳುತ್ತಾರೆ. ಆದರೆ, ನೀವು ಇಲ್ಲಿಂದ ಆಚೆಗೆ ಅಲ್ಲಿಂದ ಈಚೆಗೆ ಮಾಡುತ್ತಿದ್ದೀರಿ ಪಾರದರ್ಶಕತೆ ಎಲ್ಲಿಗೆ ಹೋಯಿತೆಂದು ಕೇಳಿದೆ. ನಾನು ಹೇಳತಕ್ಕಂಥದ್ದನ್ನು ತಪ್ಪಾಗಿ ಭಾವಿಸಿಕೊಳ್ಳಬೇಡಿ. ಈ ವಿಷಯವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಿಮ್ಮ ಮಾತಿಗೂ ಮತ್ತು ಕೃತಿಗೂ ವ್ಯತ್ಯಾಸ ಇರಬಾರದು. ಇವತ್ತಿನ ದಿವಸ ನೀವೆಲ್ಲ ಹೇಳುತ್ತಿರುವಂತೆ it is a age of science. ಮಾನ್ಯ ದಿನೇಶ್ ಗುಂಡೂರಾವ್‌ರವರಿಗೆ ಒಂದು ಮಾತನ್ನು ಹೇಳಬೇಕಾಗಿತ್ತು. ಅವರು ಇಷ್ಟು ಬೇಗ ಎದ್ದು ಹೋಗಿದ್ದಾರೆ. ರೇಷನ್ ಕಾರ್ಡ್ ಕೊಡುವುದಕ್ಕೆ ಎಪಿಕ್ ಗಿಪಿಕ್ ಎಂದೆಲ್ಲಾ ಹೇಳುತ್ತಾರೆ. ಇವೆಲ್ಲ ನಮಗೆ ಗೊತ್ತಿರಲಿಲ್ಲ. ಆದರೆ, ಈಗ ಇವೆಲ್ಲ ಅರ್ಥವಾಗುತ್ತಿವೆ. ಒಟ್ಟಿನಲ್ಲಿ ಚುರುಕುಗೊಳಿಸತಕ್ಕಂಥ ಅವಶ್ಯಕತೆ ಇದೆ, ದಯವಿಟ್ಟು ಮಾಡಬೇಕು. ಮಾನ್ಯ ಸಚಿವರೆ, ಉತ್ತರ ಹೇಳಿ.

ಶ್ರೀ ಹೆಚ್. ಆಂಜನೇಯ:– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವಿದ್ಯಾರ್ಥಿ ವೇತನ ಕೊಡುವ ಬಗ್ಗೆ ಹೇಳುವುದಾದರೆ, 1ನೇ ತರಗತಿಯಿಂದ ಹಿಡಿದು ಪೋಸ್ಟ್ ಮೆಟ್ರಿಕ್ ಸ್ನಾತಕೋತ್ತರ ಓದುವಂಥ ವಿದ್ಯಾರ್ಥಿಗಳಿಗೂ ಸಹ ಯಾವುದೇ ದೂರು ಇಲ್ಲದೆ ನೇರವಾಗಿ ಆತನ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡುವಂಥ ಒಂದು ವಿನೂತನ, ಪಾರದರ್ಶಕವಾದಂತಹ ಬಡವರಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ನಾವು ಸಮರ್ಪಕವಾಗಿ ಅನುಷ್ಠಾನಗೊಳಿಸಿದ್ದೇವೆ. ಇಡೀ ರಾಷ್ಟ್ರದಲ್ಲಿ ಪ್ರಥಮ ಬಾರಿಗೆ ನಮ್ಮ ರಾಜ್ಯದಲ್ಲಿ ನೇರವಾಗಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಟ್ಟಿರತಕ್ಕಂಥ ರಾಜ್ಯ ಎಂಬ ಹೆಗ್ಗಳಿಕೆಗೆ ನಮ್ಮ ರಾಜ್ಯ ಪಾತ್ರವಾಗಿದೆ. ಕೇವಲ ಮಾನ್ಯ ಮಧು ಬಂಗಾರಪ್ಪನವರ ಕ್ಷೇತ್ರದಲ್ಲಿ ಆಕಸ್ಮಿಕವಾಗಿ ತಪ್ಪಾಗಿದೆ. ಇಲ್ಲಿ ಅಧಿಕಾರಿಯ ಬೇಜವಾಬ್ದಾರಿಯಿಂದ ಆಗಿದೆ. ಅದೇನೆಂದರೆ, 3.5 ಲಕ್ಷ ರೂಪಾಯಿಯ ಚೆಕ್ ಅನ್ನು ಕೆನರಾ ಬ್ಯಾಂಕ್‌ಗೆ ಹಾಕಿದ್ದಾರೆ. ಆದರೆ, ಕೆನರಾ ಬ್ಯಾಂಕ್‌ನವರು ಆ ಚೆಕ್ ಅನ್ನು ಕಳೆದು ಹಾಕಿದ್ದಾರೆ. ಆ ಚೆಕ್ ಅನ್ನು ಕಳೆದು ಹಾಕಿದ ಮೇಲೆ ಅದನ್ನು ನಮ್ಮ ಅಧಿಕಾರಿಗಳು ನೋಡಿಕೊಳ್ಳಬೇಕಾಗಿತ್ತು. ಅಂದರೆ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹೋಗಿದೆಯೇ ಅಥವಾ ಇಲ್ಲವೇ ಎಂದು ನೋಡಿಕೊಳ್ಳಬೇಕಾಗಿತ್ತು. ಇದನ್ನು ಅಧಿಕಾರಿಗಳು ನೋಡಿಕೊಂಡಿಲ್ಲ. ಬ್ಯಾಂಕ್‌ನವರದು ಮತ್ತು ನಮ್ಮ ಅಧಿಕಾರಿಗಳ ಬೇಜವಾಬ್ದಾರಿತನ ಇದರಲ್ಲಿದೆ. ಇದರಲ್ಲಿ ಯಾರು ಬೇಜವಾಬ್ದಾರಿ ತೋರಿಸಿದ್ದಾರೆಂಬ ಬಗ್ಗೆ ತಿಳಿದುಕೊಳ್ಳಲು ಅಲ್ಲಿಗೆ ಹಿರಿಯ ಅಧಿಕಾರಿ ಒಬ್ಬರನ್ನು ಕಳುಹಿಸಿ ಯಾರು ತಪ್ಪು ಮಾಡಿದ್ದಾರೆಂಬುದನ್ನು ನೋಡಿ ಅವರಿಗೆ ಸರಿಯಾದ ಶಿಕ್ಷೆಯನ್ನು ಕೊಡುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:– Very good.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಈಗ ನೇರವಾಗಿ RTGS ಮಾಡುವಾಗ ಇಲ್ಲಿಗೆ ಏಕೆ ಚೆಕ್‌ಗಳನ್ನು ಕೊಟ್ಟರು?

ಶ್ರೀ ಹೆಚ್. ಆಂಜನೇಯ:– ನಾನು ಬ್ಯಾಂಕ್‌ನವರಿಗೆ ಚೆಕ್ ಕೊಡುತ್ತೇವೆ. ಅವರು ವಿದ್ಯಾರ್ಥಿಗಳ ಖಾತೆಗೆ ಹಣ ಜಮಾ ಮಾಡುತ್ತಾರೆ.

ಅಧ್ಯಕ್ಷರು:– ಮಾನ್ಯ ರವಿರವರೆ, ಮಾನ್ಯ ಸಚಿವರು ಮೊದಲು ಉತ್ತರ ಹೇಳಲಿ. ಮಂತ್ರಿಗಳು ಉತ್ತರ ಕೊಡುವಾಗ ನೀವು ಕುಳಿತುಕೊಂಡು ಅವರ ಉತ್ತರ ಕೇಳಬೇಕು.

ಶ್ರೀ ಸಿ.ಟಿ. ರವಿ:– ವಿದ್ಯಾರ್ಥಿಗಳ ಖಾತೆಗೆ ನೀವು ನೇರವಾಗಿ RTGS ಮಾಡಬಹುದು. ಈಗ RTGS ಮಾಡುವುದಕ್ಕೆ ಅವಕಾಶ ಇದ್ದಾಗಲೂ ಕೂಡ ನೀವೇಕೆ ಚೆಕ್ ಅನ್ನು ವಿತರಣೆ ಮಾಡಿದ್ದೀರಿ?

ಶ್ರೀ ಹೆಚ್. ಆಂಜನೇಯ:– ನಾವು ಬ್ಯಾಂಕ್‌ನವರಿಗೆ ಚೆಕ್ ಕೊಡುತ್ತೇವೆ. ಬ್ಯಾಂಕ್ ಮೂಲಕ ಆಯಾ ವಿದ್ಯಾರ್ಥಿಗಳ ಖಾತೆಗೆ ಹೋಗುತ್ತದೆ. ಈ ರೀತಿಯಾದ ಒಂದು ವ್ಯವಸ್ಥೆಯನ್ನು ಮಾಡಲಾಗಿದೆ. ಸ್ಥಳೀಯ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಅಲ್ಲಿ ಅಂಕಿ–ಸಂಖ್ಯೆಗಳನ್ನು ನೋಡಿಕೊಂಡು ಅವರ ಬ್ಯಾಂಕ್ ಅಕೌಂಟ್‌ನ್ನು ನೋಡಿ ಬ್ಯಾಂಕ್‌ನವರಿಗೆ ಕೊಡುತ್ತಾರೆ. ಬ್ಯಾಂಕ್‌ನಿಂದ online ಮೂಲಕ ಅವರ ಖಾತೆಗೆ ಜಮಾ ಆಗುತ್ತದೆ. ಇದರಲ್ಲಿ ಬ್ಯಾಂಕ್ ಮ್ಯಾನೇಜರ್ ಮತ್ತು ನಮ್ಮ ಸಿಬ್ಬಂದಿಯ ತಪ್ಪಿನಿಂದ ಈ ರೀತಿಯಾಗಿದೆ. ಆದ್ದರಿಂದ, ನಾನು ವಿಷಾದಿಸುತ್ತೇನೆ. ತಪ್ಪು ಮಾಡಿರುವಂಥ ಅಧಿಕಾರಿಗಳ ವಿರುದ್ಧ ನಾನು ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲಿ. ಅದಕ್ಕಿಂತ ಮುಂಚೆ ಹಣ ಬಿಡುಗಡೆ ಮಾಡಿ ವಿದ್ಯಾರ್ಥಿಗಳಿಗೆ ಮೊದಲು ಕೊಡತಕ್ಕಂಥ ಕೆಲಸ ಆಗಬೇಕು.

ಶ್ರೀ ಹೆಚ್. ಆಂಜನೇಯ:– ಮಾನ್ಯ ಅಧ್ಯಕ್ಷರೆ, ತಕ್ಷಣ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ. ನಾಳೆ ಅಥವಾ ನಾಡಿದ್ದರೊಳಗೆ ಕೊಡಿಸುತ್ತೇನೆ.

ಅಧ್ಯಕ್ಷರು:– ಆಯಿತು. ಮತ್ತೊಂದು ವಿಚಾರ ಏನೆಂದರೆ, ಸ್ಕಾಲರ್‌ಶಿಪ್ ಹಣವನ್ನು ಡಿಲೇ ಮಾಡುವುದಕ್ಕೆ ಹೋಗಬೇಡಿ. ದಯವಿಟ್ಟು ಆಯಾ ವರ್ಷವೇ ಕೊಡತಕ್ಕಂಥ ವ್ಯವಸ್ಥೆ ಮಾಡಿ.

ಶ್ರೀ ಹೆಚ್. ಆಂಜನೇಯ:– ಆಯಿತು. ಎಲ್ಲಿಯಾದರೂ ದೂರು ಬಂದರೆ ತಕ್ಷಣೆ ಕೊಡಿಸುವ ವ್ಯವಸ್ಥೆ ಕೂಡ ಮಾಡುತ್ತೇವೆ.

ಗಂಗಾ ಕಲ್ಯಾಣ ಯೋಜನೆ

45(664); ಶ್ರೀ ಮಂಜುನಾಥ ಗೌಡ ಕೆ.ಎಸ್. (ಮಾಲೂರು)

ಅ) 2014–15ನೇ ಸಾಲಿನಲ್ಲಿ ಕೋಲಾರ ಜಿಲ್ಲೆಗೆ ಗಂಗಕಲ್ಯಾಣ ಯೋಜನೆಯಡಿ ಎಷ್ಟು ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ನೀಡಲಾಗಿದೆ; (ತಾಲ್ಲೂಕುವಾರು ವಿವಿಧ ಯೋಜನೆವಾರು ಫಲಾನುಭವಿಗಳ ಹೆಸರುಗಳ ಸಮೇತ ವಿವರ ನೀಡುವುದು);

ಆ) ಕೋಲಾರ ಜಿಲ್ಲೆಯ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಫಲಾನುಭವಿಗಳ ಸಂಖ್ಯೆ ಹೆಚ್ಚಿದ್ದು ಈ ಯೋಜನೆಯ ಸೌಲಭ್ಯವನ್ನು ಕಡಿಮೆ ಸಂಖ್ಯೆಯಲ್ಲಿ ನೀಡಲಾಗಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ

ಇ) ಈ ಯೋಜನೆಯ ಸೌಲಭ್ಯವನ್ನು ಫಲಾನುಭವಿಗಳಿಗೆ ನೀಡುವಲ್ಲಿ ತಾರತಮ್ಯವಾಗುತ್ತಿದ್ದು, ಮುಂದಿನ ಸಾಲಿನಲ್ಲಿ ಈ ಯೋಜನೆಯ ಗುರಿಯನ್ನು ಹೆಚ್ಚಿಸಲು ಸರ್ಕಾರದ ಕ್ರಮ ಕೈಗೊಳ್ಳುವುದೇ;

ಈ) ಈ ಯೋಜನೆಯ ಸೌಲಭ್ಯವನ್ನು ಫಲಾನುಭವಿಗಳಿಗೆ ನೀಡಲು ಕಾಲಮಿತಿಯನ್ನು ಸರ್ಕಾರ ನಿಗದಿಪಡಿಸಿದೆಯೇ; ಹಾಗಿದ್ದಲ್ಲಿ, ನೀಡಿರುವ ಕಾಲಮಿತಿ ಎಷ್ಟು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)

ಅ)

ಕ್ರ.ಸಂ.	ಕೊಳವೆ ಬಾವಿ ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ